Spl Com (SWM) | PR-46 | 2015-16.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿ: 18-01-2016ರಂದು ಸಾಯಂಕಾಲ 5.00 ಘಂಟೆಗೆ ಐಪಿಪಿ ಮಲ್ಲೇಶ್ವರಂನಲ್ಲಿ ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಹಾಗೂ ಭೂ ಭರ್ತಿ ಜಾಗಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯ ನಡವಳಿ.**

**<u>ಕ್ವಾರಿಪಿಟ್ (Quarries pit):</u>**

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಬೆಂಗಳೂರು ವ್ಯಾಪ್ತಿಯಲ್ಲಿ ಮಿಶ್ರ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಅನೇಕ ಕ್ವಾರಿಗಳನ್ನು (Quarries) ಗುರುತಿಸಿದ್ದು ಅದರ ಸ್ಥಿತಿಗತಿಗಳನ್ನು ಪರಿಶೀಲನೆ ನಡೆಸಿ ವರದಿ ನೀಡಲು ಎಲ್ಲಾ ವಲಯದ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದರೂ ಸಹ ಈವರೆಗೆ ವರದಿ ಸಲ್ಲಿಸಿರುವುದಿಲ್ಲ.

ಅದರಿಂದ ಜರೂರಾಗಿ ಕ್ವಾರಿ ಪಿಟ್‌ಗಳ ಸುತ್ತಮುತ್ತಲಿನ ಗ್ರಾಮಸ್ಥರೊಂದಿಗೆ ಹಾಗೂ ಸ್ಥಳೀಯ ಜನ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಮನವೊಲಿಸುವ ಕಾರ್ಯ, ಎಕ್ಸ್‌ಪರ್ಟ್ ಕಮಿಟಿ ಸದಸ್ಯರು ಹಾಗೂ IISc ವಿಜ್ಞಾನಿಗಳಿಂದ ಸದರಿ ಸ್ಥಳಗಳನ್ನು ಪರಿಶೀಲನೆ ನಡೆಸುವುದು ಹಾಗೂ ಕ್ವಾರಿ ಪಿಟ್‌ಗಳ ಹತ್ತಿರ ಮಿಶ್ರ ಕಸ ಹಾಕುವ ಬಗ್ಗೆ ಫಲಕಗಳನ್ನು ಅಳವಡಿಸುವ ಕಾರ್ಯಗಳನ್ನು ತುರ್ತಾಗಿ ನೆರವೇರಿಸಿ ದಿ: 30-01-2016ರ ಒಳಗೆ ಎಲ್ಲಾ ವಲಯದ ಅಧಿಕಾರಿಗಳೂ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

ಕ್ರಮ: ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು

**<u>ಬಯೋ ಮೆಥನೈಜೇಶನ್ (Bio-methanisation):</u>**

ಬಯೋ-ಮೆಥನೈಜೇಶನ್ ಘಟಕ ಸ್ಥಾಪಿತವಾಗಿರುವ ಘಟಕಗಳಿಗೆ ಅವಶ್ಯವಿರುವ ಹಸಿ ಕಸವನ್ನು ಪೂರ್ಣ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ಸರಬರಾಜು ಮಾಡಲು ಹಾಗೂ ಬಯೋ ಮೆಥನೈಜೇಶನ್ ಘಟಕ ನಿರ್ವಹಣೆ **<u>(O&M)</u>** ಮಾಡುತ್ತಿರುವ ಸಂಸ್ಥೆಗಳಿಗೆ ಪ್ರತಿ ತಿಂಗಳೂ ಸಮಯಕ್ಕೆ ಸರಿಯಾಗಿ ಹಣವನ್ನು ನೀಡಲು ತಿಳಿಸುತ್ತಾ ದಿ: 31-03-2016 ರವರೆಗೆ ನಿರ್ವಹಣೆಗೆ ಬೇಕಾಗಿರುವ ಹಣದ ಬೇಡಿಕೆಯನ್ನು ಹಾಗೂ ಈ ಹಿಂದೆ ನಿರ್ವಹಣೆ ಮಾಡಿರುವ ಬಿಲ್‌ಗಳನ್ನು ಹಣ ಬಿಡುಗಡೆಗಾಗಿ ಸಿ.ಎ.ಒ. ಕಛೇರಿಗೆ ತುರ್ತಾಗಿ ಸಲ್ಲಿಸಲು ಸೂಚಿಸಿದರು. ಈಗಾಗಲೇ

ನಿರ್ಮಾಣ ಮಾಡಿರುವ ಘಟಕಗಳನ್ನು ಪರಿಶೀಲನೆ ಮಾಡಿ ಕರಾರಿನಂತೆ ನಿಯಮಾನುಸಾರ ಕ್ರಮ ವಹಿಸಿ ವರದಿ ನೀಡಲು ಸಹ ಸೂಚಿಸಿದರು.

ಕ್ರಮ: ಪ್ರಗತಿ ಪರಿಶೀಲನೆ ಸಮಿತಿ ಮತ್ತು ಎಲ್ಲಾ ಅಧೀಕ್ಷಕ ಅಭಿಯಂತರರು.

**ಕಸ ವಿಂಗಡನೆ ಪ್ರಗತಿ ಮತ್ತು ಘಟಕಗಳಿಗೆ ಕಸ ನಿರ್ವಹಣೆ ನಿಯೋಜನೆ(Segregation progress and allocation):**

ದಿ:07-12-2015ರಂದು ವಿವಿಧ ಘಟಕಗಳಿಗೆ ಈಗಾಗಲೇ ನಿಗಧಿತ ಪ್ರಮಾಣದ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ತಿಳಿಸಿ ಕ್ರಮೇಣ ಕಾಲಕಾಲಕ್ಕೆ ಕಸ ವಿಂಗಡಣೆಗೆ ಒತ್ತು ನೀಡಲು ಸೂಚಿಸಲಾಗಿತ್ತು. ಆದರೆ ವಿಂಗಡಣೆಯ ಬಗ್ಗೆ ಹೆಚ್ಚು ಒತ್ತು ನೀಡದೇ ಇರುವುದರಿಂದ ಮಾನ್ಯ ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರು ವಿಷಾದ ವ್ಯಕ್ತಪಡಿಸುತ್ತಾ, ಜರೂರಾಗಿ ವಲಯವಾರು ಶೇ 60 ರಷ್ಟು ಪ್ರತ್ಯೇಕವಾಗಿ ಹಸಿ ಕಸವನ್ನು ವಿಂಗಡಣೆ ಮಾಡಲು ಸೂಚಿಸುತ್ತಾ, ವಿವಿಧ ಘಟಕಗಳಿಗೆ ನಿಗಧಿತ ಪ್ರಮಾಣದ ಘನತ್ಯಾಜ್ಯ ವಸ್ತುಗಳನ್ನು ನಿಯೋಜಿಸಲು ದಿ: 21-01-2016ರ ಒಳಗೆ ವರದಿ ನೀಡಲು ತಿಳಿಸಲಾಯಿತು.

ಕ್ರಮ: ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು.

**ದೊಡ್ಡ ಪ್ರಮಾಣದ ಕಸ (Bulk Waste):**

ದೊಡ್ಡ ಮಟ್ಟದಲ್ಲಿ ಘನತ್ಯಾಜ್ಯ ಉತ್ಪಾದನೆ ಮಾಡುತ್ತಿರುವುದರಿಂದ ಜರೂರಾಗಿ ಕಸ ವಿಂಗಡನೆ ಮಾಡುವುದು ಹಾಗೂ ಮಾಡದೇ ಇರುವ ಪಕ್ಷದಲ್ಲಿ ಕೆ.ಎಂ.ಸಿ. ಕಾಯ್ದೆಯನ್ವಯ ದಂಡ ವಿಧಿಸಲು ಕ್ರಮ ವಹಿಸಲು ತಿಳಿಸಿದರು. ದೊಡ್ಡ ಪ್ರಮಾಣದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಸಾಗಾಣಿಕೆ ಗುತ್ತಿಗೆದಾರರು ಯಾವ ಯಾವ ಪ್ರದೇಶದಲ್ಲಿ ವಿಲೇವಾರಿ ಮಾಡುತ್ತಿರುತ್ತಾರೆ ಎಂದು ಪರಿಶೀಲಿಸುವುದು ಮತ್ತು ಈಗಾಗಲೇ ವಿಲೇವಾರಿ ಮಾಡುವ ಸಂಬಂಧ ನಿಗಧಿತ ಸ್ಥಳವನ್ನು ನೀಡಿರುವ ಗುತ್ತಿಗೆದಾರರ ಸ್ಥಳವನ್ನು ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. ಕೆಲವು ವಲಯ ವ್ಯಾಪ್ತಿಯಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಾಗಾಣಿಕೆ ಮಾಡುವ ಗುತ್ತಿಗೆದಾರರ ಕರಾರು ಅಂತ್ಯವಾಗಿದ್ದು, ಉಳಿದಂತೆ ಫೆಬ್ರವರಿ /ಮಾರ್ಚ್ ಒಳಗೆ ಎಲ್ಲಾ ಗುತ್ತಿಗೆದಾರರ ಕರಾರು ಮುಗಿದಿರುವುದರಿಂದ ಗುಣಮಟ್ಟದ ಗುತ್ತಿಗೆದಾರರನ್ನು ಗುರುತಿಸಿ **Re-empanel** ಅನ್ನು ರಚನೆ ಮಾಡಲು ಹಾಗೂ ಎಸ್.ಡಬ್ಲ್ಯೂ.ಎಂ. Cess ಬಗ್ಗೆ ಪರಿಶೀಲನೆ ನಡೆಸಿ Cess ಮರು ನಿಗಧಿಪಡಿಸಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

ಕ್ರಮ: ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು/ಪ್ರಧಾನ ಅಭಿಯಂತರರು

**ಪೌರಕಾರ್ಮಿಕರಿಗೆ ಹಾಗೂ ಗುತ್ತಿಗೆದಾರರಿಗೆ ಹಣ ಪಾವತಿಸುವ ಕುರಿತು (PK's & Contractor Payment):**

ಪ್ರತಿ ತಿಂಗಳು ಪೌರ ಕಾರ್ಮಿಕರಿಗೆ ನಿಗಧಿತ ಸಮಯದಲ್ಲಿ ಸಂಬಳ ನೀಡುತ್ತಿರುವ ಕುರಿತು ಹಾಗೂ ಜರೂರಾಗಿ **ESI&PF** ಪಾವತಿ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ತಿಳಿಸಲಾಯಿತು. ಪೌರ ಕಾರ್ಮಿಕರಿಗೆ ಅಗತ್ಯ ಸಲಕರಣೆಗಳನ್ನು ಗುತ್ತಿಗೆದಾರರು ನೀಡಿರುವ ಬಗ್ಗೆ ಪರಿಶೀಲನೆ ನಡೆಸುವುದು, ಮೂರು ತಿಂಗಳಿಗೊಮ್ಮೆ ಆರೋಗ್ಯ ಶಿಬಿರವನ್ನು ಏರ್ಪಸಿಸಲು ಸೂಚಿಸಲಾಯಿತು. ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳುವ ಬಗ್ಗೆ ಅಪರ ಆಯುಕ್ತರಿಂದ ನಿಯಮಾನುಸಾರ ಸಿದ್ಧಪಡಿಸಲಾಗುತ್ತಿದ್ದು, ಅದರಂತೆ ಕ್ರಮ ವಹಿಸಲು ತಿಳಿಸಲಾಯಿತು. ಸರಿಯಾಗಿ ಕೆಲಸ ನಿರ್ವಹಿಸದ ಗುತ್ತಿಗೆದಾರರಿಗೆ ತಿಂಗಳ ಬಿಲ್ಲಿನಲ್ಲಿ ನಿಯಮಾನುಸಾರ ಅಗತ್ಯ ಕಟಾವಣೆ ಮಾಡಲು ಸೂಚಿಸಲಾಯಿತು.

ಕ್ರಮ: ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು

**ಟಾಯ್ಲೆಟ್ ಲೋಕೆಟರ್ (Toilet locator):**

ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲು ಟಾಯ್ಲೆಟ್ ಲೋಕೆಟರ್ ಮೊಬೈಲ್ ಅಪ್ಲಿಕೇಶನ್ ಮೂಲಕ ಶೌಚಾಲಯಗಳನ್ನು ಗುರುತಿಸಬಹುದಾಗಿರುತ್ತದೆ. ಇದರಿಂದ ಸಾರ್ವಜನಿಕರು ಅನ್ ಲೈನ್‌ನಲ್ಲಿ ತಾವು ಇದ್ದ ಸ್ಥಳದ ಅಕ್ಕಪಕ್ಕದಲ್ಲಿ ಲಭ್ಯವಿರುವ ಶೌಚಾಲಯಗಳನ್ನು ಶೀಘ್ರವಾಗಿ ಗುರುತಿಸಬಹುದಾಗಿರುತ್ತದೆ. ಸದರಿ ಅಪ್ಲಿಕೇಶನನ್ನು ವಾರ್ಡ್‌ವಾರು ಡೌನ್‌ಲೋಡ್ ಮಾಡಿಕೊಂಡು ಶೌಚಾಲಯಗಳ ಮಾಹಿತಿಗಳನ್ನು ಲೊಕೆಟರ್‌ಗೆ ದಿ: 21-01-2016ರೊಳಗೆ ತುರ್ತಾಗಿ ಅಪ್‌ಲೋಡ್ ಮಾಡಲು ಸೂಚಿಸಲಾಯಿತು.

ಕ್ರಮ: ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು

**ಸಾರ್ವಜನಿಕ/ಸಮುದಾಯ ಮತ್ತು ವೈಯಕ್ತಿಕ ಶೌಚಾಲಯಗಳ ವರದಿ ನೀಡುವ ಬಗ್ಗೆ: (Finalization of info on individual toilets/community toilet/public toilets):**

ವಾರ್ಡ್‌ವಾರು ಸಾರ್ವಜನಿಕ/ಸಮುದಾಯ ವೈಯಕ್ತಿಕ ಶೌಚಾಲಯಗಳ ವಿವರಗಳನ್ನು ದಿ: 13-01-2016ರಂದು ನೀಡದ 2 ನಮೂನೆಗಳನ್ನು ಭರ್ತಿ ಮಾಡಿ ಸಹಿ ಮಾಡಿ ವಿಶೇಷ ಆಯುಕ್ತರು (ಘ.ತ್ಯಾ.ನಿ.)ರವರ ಕಛೇರಿಗೆ ನಮೂನೆಗಳು 21-01-2016ರೊಳಗೆ ನೀಡಬೇಕಾಗಿರುತ್ತದೆ.

ಕ್ರಮ: ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು.

**ಕಟ್ಟಡ ಭಗ್ನಾವಶೇಷಗಳು (C&D Waste):**

ಕಟ್ಟಡ ಭಗ್ನಾವಶೇಷಗಳು ಘನತ್ಯಾಜ್ಯ ವಸ್ತುಗಳ ಜೊತೆಯಲ್ಲಿ ಮಿಶ್ರಣ ಹೊಂದುತ್ತಿದ್ದು ಇದರ ಬಗ್ಗೆ ನಿಯಮ ರೂಪಿಸಬೇಕಾಗಿರುತ್ತದೆ. ನಿಯಮ ರೂಪಿಸುವ ಬಗ್ಗೆ ಅಭಿಪ್ರಾಯ ನೀಡಲು ತಿಳಿಸಿದರು.

ಕ್ರಮ: ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ವಿಶೇಷ ಆಯುಕ್ತರು,
(ಘನ ತ್ಯಾಜ್ಯ/ಆರೋಗ್ಯ)

**ಪ್ರತಿಯನ್ನು:**

1) ಮೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2) ಉಪ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3) ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4) ಆಯುಕ್ತರು, ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5) ವಿಶೇಷ ಆಯುಕ್ತರು, (ಯೋಜನೆ), (ಹಣಕಾಸು), (ಕಲ್ಯಾಣ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7) ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ
8) ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ
9) ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ
10) ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
11) ಕಛೇರಿ ಕಡತಕ್ಕೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರವರ ಕಛೇರಿ
01 FEB 2016